ಏಪ್ರಿಲ್ 19, 2004

**ತೂಕದ ಮೂಲಕ ನಾಣ್ಯಗಳನ್ನು ಸ್ವೀಕರಿಸಲು ಬ್ಯಾಂಕುಗಳಿಗೆ ಆರ್‌ಬಿಐ ಸೂಚನೆಗಳು**

ಸಾರ್ವಜನಿಕರು, ಈಗ, ಚಾಲ್ತಿಯಲ್ಲಿರುವ ಮತ್ತು ಚಾಲ್ತಿಯಲ್ಲಿಲ್ಲದಿರುವ ನಾಣ್ಯಗಳನ್ನು, ಸಾರ್ವಜನಿಕ ಮತ್ತು ಖಾಸಗಿ ವಲಯ ಬ್ಯಾಂಕುಗಳ ಕೌಂಟರುಗಳಲ್ಲಿ ಹಾಗೆಯೇ, ಭಾರತೀಯ ರಿಸರ್ವ್ ಬ್ಯಾಂಕು ಕೌಂಟರುಗಳಲ್ಲಿ ನೀಡಬಹುದು. ಬ್ಯಾಂಕುಗಳು ಮತ್ತು ರಿಸರ್ವ್ ಬ್ಯಾಂಕು ಈ ನಾಣ್ಯಗಳನ್ನು ತೂಕ ಮಾಡಿ ಸ್ವೀಕರಿಸುತ್ತವೆ.

ಭಾರತೀಯ ರಿಸರ್ವ್ ಬ್ಯಾಂಕು, 5 ಪೈಸೆ, 10 ಪೈಸೆ, 20 ಪೈಸೆ, ಅಲ್ಯೂಮಿನಿಯಂ ನಾಣ್ಯಗಳು, 10 ಪೈಸೆಯ ಅಲ್ಯೂಮಿನಿಯಂ ಕಂಚಿನ ನಾಣ್ಯಗಳು, 10 ಪೈಸೆಯ ಸ್ಟೇನ್ ಲೆಸ್ ಸ್ಟೀಲ್ ನಾಣ್ಯಗಳು, 25 ಪೈಸೆ, 50 ಪೈಸೆ ಮತ್ತು ಒಂದು ರೂಪಾಯಿಯ ಕ್ಯುಪ್ರೊನಿಕಲ್ ನಾಣ್ಯಗಳನ್ನು ತೂಕದ ಮೂಲಕ ಸ್ವೀಕರಿಸಲು ಮುಂಬಯಿ ನಗರದ ಸಾರ್ವಜನಿಕ/ಖಾಸಗಿ ವಲಯ ಬ್ಯಾಂಕುಗಳ ಎಲ್ಲಾ ಶಾಖೆಗಳಿಗೂ ಸೂಚಿಸಿದೆ. ರಿಸರ್ವ್ ಬ್ಯಾಂಕು, ಡಿನಾಮಿನೇಷನ್ ಪ್ರಕಾರ ಮತ್ತು ಲೋಹದ ಪ್ರಕಾರ, ಪಾಲಿಥಿನ್ ಚೀಲಗಳಲ್ಲಿ 100 ನಾಣ್ಯಗಳ ಸಗಟಿನಂತೆ ಕೌಂಟರುಗಳಲ್ಲಿ ನೀಡುವಂತೆ ಅಂಥ ನಾಣ್ಯಗಳ ದಾಸ್ತಾನನ್ನು ಹೊಂದಿರುವ ಸಾರ್ವಜನಿಕರನ್ನು ವಿನಂತಿಸಿದೆ. ಚಾಲ್ತಿಯಲ್ಲಿರುವ 25 ಪೈಸೆ, 50 ಪೈಸೆ ಮತ್ತು ಒಂದು ರೂಪಾಯಿ ಸ್ಟೇನ್‌ಲೆಸ್ ಸ್ಟೀಲ್ ನಾಣ್ಯಗಳು ಹಾಗೂ ಎರಡು ರೂಪಾಯಿ ಮತ್ತು ಐದು ರೂಪಾಯಿಯ ಕ್ಯುಪ್ರೊನಿಕಲ್ ನಾಣ್ಯಗಳನ್ನು ಸ್ವೀಕರಿಸಲು ಸಹಾ, ಅದೇ ರೀತಿಯ ವ್ಯವಸ್ಥೆಯಿದೆ.

ಅಲ್ಪನಾ ಕಿಲ್ಲಾವಾಲಾ
ಮುಖ್ಯ ಪ್ರಧಾನ ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2003–2004/1241